ಅಧ್ಯಕ್ಷರು : ಈಗ ಪ್ರಶ್ನೆಗಳಲ್ಲಿ 13 ಒರಿಜಿನಲ್ ಮತ್ತು 13 ಹೆಲ್ಡ್ ಓವರ್-ಒಟ್ಟು 26 ಪ್ರಶ್ನೆಗಳಿಗೆ ಉತ್ತರಗಳು ಬಂದಿವೆ. ಪ್ರಶ್ನೋತ್ತರ ವೇಳೆ ಹತ್ತೂವರೆ ಗಂಟೆಗೆ ಪ್ರಾರಂಭ ಮಾಡಿ, 12 ಗಂಟೆಗೆ ಮುಗಿಸಬೇಕು. ಏಕೆಂದರೆ ನಾವು ಈಗಾಗಲೇ ಒಂದೂವರೆ ಗಂಟೆ ಎಂದು ಹೇಳಿದ್ದೇವೆ. ಆಯಾ ಕ್ಷೇತ್ರದ ಪ್ರಶ್ನೆ ಬಂದಾಗ, ಅವರೇ ಕೇಳಬೇಕು. ಏನೆಂದರೆ, ನಮಗೆ ಹೆಚ್ಚಿಗೆ ಸಮಯ ಇಲ್ಲ. 26 ಪ್ರಶ್ನೆಗಳಿಗೆ ಬಹಳ ಸಮಯ ಬೇಕಾಗುತ್ತದೆ. ಈಗ ಮೊದಲನೇ ಪ್ರಶ್ನೆ ಮಾನ್ಯ ಗುತ್ತೇದಾರ್ ಅವರು ಕೇಳಲಿ.

(3) ಪ್ರಶ್ನೋತ್ತರಗಳು

(ಅ) ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ಗುಲ್ಬರ್ಗಾ ಜಿಲ್ಲೆಯ ಏತ ನೀರಾವರಿ ಯೋಜನೆ

346 (3390) ಶ್ರೀ ಮಾಲೀಕಯ್ಯ ವೆಂಕಯ್ಯ ಗುತ್ತೇದಾರ (ಅಫಜಲ್‌ಪುರ) :- ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಗುಲ್ಬರ್ಗಾ ಜಿಲ್ಲೆಯ ಏತ ನೀರಾವರಿ ಯೋಜನೆಯ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮವೇನು?

ಆ) ಹಾಗಿದ್ದಲ್ಲಿ ಯೋಜನೆಯ ಯಾವ ಹಂತದಲ್ಲಿದೆ : (ವಿವರ ಒದಗಿಸುವುದು)

ಇ) ಪ್ರಸಕ್ತ ಸಾಲಿನಲ್ಲಿ ಯೋಜನೆಗೆ ಬಿಡುಗಡೆಯಾಗಿರುವ ಹಣವೆಷ್ಟು?

ಶ್ರೀ ಎಸ್. ಕುಮಾರ್ ಬಂಗಾರಪ್ಪ (ಸಣ್ಣ ನೀರಾವರಿ ರಾಜ್ಯ ಸಚಿವರು)

ಅ) ಗುಲ್ಬರ್ಗಾ ಜಿಲ್ಲೆಯ ವ್ಯಾಪ್ತಿಯಲ್ಲಿ ಒಟ್ಟು 44 ಏತ ನೀರಾವರಿ ಯೋಜನೆಗಳಿದ್ದು, ಆ ಪೈಕಿ 8 ಯೋಜನೆಗಳು ಸುಸ್ಥಿತಿಯಲ್ಲೂ 10 ಯೋಜನೆಗಳು ಸಾಮಾನ್ಯ ದುರಸ್ತಿ ಹಾಗೂ 8 ಯೋಜನೆಗಳು ಭಾರಿ ದುರಸ್ತಿಯಾಗಬೇಕಾಗಿದೆ. ಉಳಿದವುಗಳಲ್ಲ 8 ಯೋಜನೆಗಳು ಮುಂದುವರೆದ ಕಾಮಗಾರಿ ಇನ್ನೂಳಿದ 10 ಯೋಜನೆಗಳು ನಿಷ್ಕ್ರಿಯ ಗೊಂಡಿದೆ. ಮುಂದುವರೆದ ಕಾಮಗಾರಿಗಳ ಪೈಕಿ 8 ಕಾಮಗಾರಿಗಳ ವಿವರ ಈ ರೀತಿ ಇವೆ.

ಕಾಮಗಾರಿಗಳ ಹೆಸರು	ಷರಾ
1	2
1) ಮಣ್ಣೂರು ಏತ ನೀರಾವರಿ ಯೋಜನೆ	ಕಾಮಗಾರಿಪ್ರಗತಿಯಲ್ಲಿದೆ.
2) ಹೆಡಗಿ ಮದ್ರಾ ನೀರಾವರಿ ಯೋಜನೆ	ಭೌತಿಕವಾಗಿ ಪೂರ್ಣಗೊಂಡಿದೆ.
3) ಕಲ್ಲೂರ (ಕೆ) ಏತ ನೀರಾವರಿ ಯೋಜನೆ (ಹೊಸದು)	ಸದರಿ ಕಾಮಗಾರಿಗೆ ಸಾಂಕೇತಿಕ ಅನುದಾನ ವಿರುತ್ತದೆ.
4) ಐಕೂರ ಏತ ನೀರಾವರಿ ಯೋಜನೆ	ಪ್ರಗತಿಯಲ್ಲಿದೆ

1	2
5) ಅಸಕಸೂಗೂರ ಏತ ನೀರಾವರಿ ಯೋಜನೆ	ಪ್ರಗತಿಯಲ್ಲಿದೆ
6) ಅಂಗೇರಿ ಏತ ನೀರಾವರಿ ಯೋಜನೆ	ಭೌತಿಕ ಪೂರ್ಣ ಗೊಂಡಿದೆ
7) ಕರಣಗಿ ಏತ ನೀರಾವರಿ ಯೋಜನೆ	ಭೌತಿಕ ಪೂರ್ಣ ಗೊಂಡಿದೆ
8) ಚಿಂಚನಗಡ್ಡಿ ಏತ ನೀರಾವರಿ ಯೋಜನೆ	ಸದರಿ ಕೆಲಸವನ್ನು ಟೆಂಡರ್ ಕರೆಯಲಾಗಿದೆ

ಇವುಗಳ ಪೈಕಿ 3 ಕಾಮಗಾರಿಗಳು ಮುಕ್ತಾಯಗೊಂಡಿದ್ದು, ಇನ್ನುಳಿದವುಗಳನ್ನು ಪ್ರಸ್ತುತ ಸಾಲಿನಲ್ಲಿ ಮುಕ್ತಾಯಗೊಳಿಸಲು ಕ್ರಮ ಕೈಗೊಳ್ಳಲಾಗುವುದು. ನಿಷ್ಕ್ರಿಯಗೊಂಡಿರುವ ಮತ್ತು ದುರಸ್ತಿಯಾಗಬೇಕಾಗಿರುವಯೋಜನೆಗಳಿಗೆ ಪ್ರಸ್ತುತ ಸಾಲಿನಲ್ಲಿ ಆರ್ಥಿಕ ಲಭ್ಯತೆ ಅಧರಿಸಿ ಕ್ರಮ ಕೈಗೊಳ್ಳಲಾಗುವುದು.

ಇ) 1999-2000ನೇ ಸಾಲಿನಲ್ಲಿ ಈ ಯೋಜನೆಗಳಿಗೆ 42.00 ಲಕ್ಷ ರೂ. ಬಿಡುಗಡೆಯಾಗಿದೆ. 2000-2000 1ನೇ ಸಾಲಿಗೆ ಅನುದಾನ ವಿವರ ಪರಿಶೀಲನೆಯಲ್ಲಿದೆ.

ಶ್ರೀ ಮಾಲೀಕಯ್ಯ ವೆಂಕಯ್ಯ ಗುತ್ತೇದಾರ್ : ಮಾನ್ಯ ಅಧ್ಯಕ್ಷರೇ, ಗುಲ್ಬರ್ಗಾ ಜಿಲ್ಲೆಯ ವ್ಯಾಪ್ತಿಯಲ್ಲಿ ಒಟ್ಟು 44 ಏತ ನೀರಾವರಿ ಯೋಜನೆಗಳಿದ್ದು, ಆ ಪೈಕಿ 8 ಯೋಜನೆಗಳು ಸುಸ್ಥಿತಿಯಲ್ಲೂ ಮತ್ತು 10 ಯೋಜನೆಗಳು ಸಾಮಾನ್ಯ ದುರಸ್ತಿ ಎಂದೂ ಉತ್ತರ ಕೊಟ್ಟಿದ್ದಾರೆ. 8 ಸುಸ್ಥಿತಿಯಲ್ಲಿರತಕ್ಕ ಯೋಜನೆಗಳ ಮಾಹಿತಿಯನ್ನು ಇಲ್ಲಿ ಕೊಟ್ಟಿದ್ದಾರೆ. ಇನ್ನು ಸಾಮಾನ್ಯ ದುರಸ್ತಿಯಲ್ಲಿರತಕ್ಕ 10 ಯೋಜನೆಗಳು ಯಾವುವು ಎಂಬುದನ್ನು ಈ ಸದನಕ್ಕೆ ತಿಳಿಸಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಕುಮಾರ್ ಬಂಗಾರಪ್ಪ : ಮಾನ್ಯ ಅಧ್ಯಕ್ಷರೇ, ಮಾಗಾವಿ ಏತ ನೀರಾವರಿ ಯೋಜನೆ, ಅಂಕಲಗಾಂವ್, ಪಿರೋಜಾಬಾದ್, ಕಮಲಾನಗರ, ಶಾಕ್‌ಪುರ, ಬಂದೇರವಾಡ್, ಗೌರ, ಶೇಷಗಿರವಾಡ್, ಮತ್ತು ಚೌಡಾಪೂರ್.

ಶ್ರೀ ಮಾಲೀಕಯ್ಯ ವೆಂಕಯ್ಯ ಗುತ್ತೇದಾರ್ : ಸನ್ಮಾನ್ಯ ಅಧ್ಯಕ್ಷರೇ, ಸುಮಾರು 1969-70ರಲ್ಲಿ ಈ ಏತ ನೀರಾವರಿ ಯೋಜನೆಗಳು ಪ್ರಾರಂಭವಾದವು. ಇವುಗಳಲ್ಲಿ ನಿಜಾಮ್ ಕಾಲದ ಪಂಪಸೆಟ್ಟುಗಳಿರುವುದರಿಂದ ಅವು ರಿಪೇರಿಯೇ ಆಗುತ್ತಾ ಇಲ್ಲ. ಇದರ ಬಗ್ಗೆ ಮಾಹಿತಿಯನ್ನು ಹಿಂದೆ ನಮ್ಮ ಸರ್ಕಾರ ಇದ್ದ ಸಂದರ್ಭದಲ್ಲಿ ಕೊಟ್ಟು, ಒಂದು ವರದಿಯನ್ನು ಕೂಡ ಕಳುಹಿಸಿದ್ದೆವು. ಆ ವರದಿಯನ್ನು, ರಿಪೇರಿ ಕಾರ್ಯಕ್ರಮ ರೂಪಿಸುವ ಸಲುವಾಗಿ ಕೊಟ್ಟಿದ್ದೆವು. ಆ ವರದಿಯು ಸರ್ಕಾರದ ಗಮನಕ್ಕೆ ಬಂದಿದೆಯೇ? ಅಫ್ಜಲ್‌ಪುರ ತಾಲ್ಲೂಕಿನಲ್ಲಿ 10 ನೀರಾವರಿ ಯೋಜನೆಗಳು ಇವೆ. ಈ ಯೋಜನೆಗಳಲ್ಲಿ ಕೇವಲ ಒಂದು ಮಾತ್ರ ಕೆಲಸ ಮಾಡುತ್ತಾರ ಇದೆ, ಮಿಕ್ಕ 9 ಕೆಲಸ ಮಾಡುತ್ತಾ ಇಲ್ಲ. ಅವು ಮೇಜರ್ ರಿಪೇರಿಯಲ್ಲಿವೆ. ಮಾನ್ಯ ಸಚಿವರು ನಮ್ಮ ಕ್ಷೇತ್ರದ ನಾಲ್ಕು ನೀರಾವರಿ ಯೋಜನೆಗಳ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. ಸುಮಾರು ಇನ್ನೂ 5 ಏತ ನೀರಾವರಿ ಯೋಜ ನೆಗಳು, ಹಾಗೆಯೇ ನಿಂತಿರುತ್ತವೆ, ಇವುಗಳ ಬಗ್ಗೆಯೂ ಸರ್ಕಾರ ಗಮನಕ್ಕೆ ತೆಗೆದು ಕೊಳ್ಳಬೇಕು. ಆ ವರದಿ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಎಂಬುದನ್ನು ತಮ್ಮ ಮೂಲಕ ಮಾನ್ಯ ಸಣ್ಣ ನೀರಾವರಿ ಸಚಿವರು ಕೇಳುತ್ತೇನೆ

ಶ್ರೀ ಕುಮಾರ್ ಬಂಗಾರಪ್ಪ : ಮಾನ್ಯ ಅಧ್ಯಕ್ಷರೆ, ಈಗಾಗಲೇ ಶ್ರೀ ಮಾಲೀಕಯ್ಯ ಗುತ್ತೇದಾರ್ ರವರು ಹೇಳಿದ ಹಾಗೆ ಆ ವರದಿಯನ್ನು ತಕ್ಷಣ ತರಿಸಿಕೊಂಡು, ಏನು ಆಗಿದೆ ಎಂಬುದನ್ನು ನೋಡುತ್ತೇವೆ ಈಗಾಗಲೇ ಏತ ನೀರಾವರಿ ಯೋಜನೆಗಳಲ್ಲಿ ಬಹಳಷ್ಟು ಕುಂಠಿತವಾಗಿರತಕ್ಕಂಥ ಯೋಜನೆಗಳು ಇವೆ ಅವು ಕೆ.ಪಿ.ಸಿ.ಟಿ. ಎಲ್.ಗೆ ಬಿಲ್ ಕಟ್ಟದೇ ಇರತಕ್ಕ ಮತ್ತು ಮೋಟಾರು ಹಾಳಾಗಿರತಕ್ಕ ಮತ್ತೆ ಕೆಲವು ಅರ್ಧಂಬರ್ಧ ಕಾಮಗಾರಿಗೇ ನಿಲ್ಲಿಸಿರತಕ್ಕ ಯೋಜನೆಗಳು ಇವೆ. ಒಟ್ಟು 44 ಯೋಜನೆಗಳಲ್ಲಿ 28 ಸಂಪೂರ್ಣ ಹಾಳಾಗಿರುತ್ತವೆ. ಕೆಲಸಕಾರ್ಯಗಳು ನಡೆಯತಕ್ಕ ಯೋಜನೆಗಳು 8 ಮತ್ತು ಇನ್ನೆರಡು ಇವೆ. ಹಾಗಾಗಿ ಈ ವರ್ಷ ಎಲ್ಲಾ ಏತನೀರಾವರಿ ಯೋಜನೆಗಳನ್ನು ತ್ವರಿತಗತಿಯಲ್ಲಿ ತೆಗೆದುಕೊಂಡು, ಕೆಲಸ ಕಾರ್ಯಗಳನ್ನು ಮುಗಿಸಲು ನಾವು ಸಂಪೂರ್ಣವಾಗಿ ಪ್ರಯತ್ನವನ್ನು ಮಾಡುತ್ತೇವೆ.

ಬೀದರ್ ನಗರದ ಮಾರ್ಕೆಟ್ ಪೋಲೀಸ್ ಠಾಣೆ ಮುಂದೆ ನಡೆದ ಕೂಲಿ ಪ್ರಕರಣವನ್ನು ಸಿ.ಓ.ಡಿ.ಗೆ ಒಪ್ಪಿಸುವ ಬಗ್ಗೆ

347 (3274) ಶ್ರೀ ಗುಂಡಪ್ಪ ವಕೀಲ್ (ಔರಾದ್): ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ದಿನಾಂಕ : 25- 11- 99ರಂದು ಬೆಳಿಗ್ಗೆ 10- 30ಗಂಟೆಗೆ ವೈಜನಾಥ್ ಪಾಟೀಲ್ ಜೀರ್ಗಾ ಇವರ ಮೇಲೆ ಬೀದರ್ ನಗರದ ಮಾರ್ಕೆಟ್ ಪೊಲೀಸ್ ಠಾಣೆ ಮುಂದೆ 5 ಸುತ್ತಿನ ಗುಂಡು ಹಾರಿಸಿ ಕೂಲೆ ಪ್ರಯತ್ನ ಮಾಡಲಾಗಿ ಮಾರ್ಕೆಟ್ ಪೋಲೀಸ್ ಠಾಣೆಯಲ್ಲಿ 9 ಜನ ಆರೋಪಿಗಳ ವಿರುದ್ಧ ಕಲಂ 307ರ ಪ್ರಕಾರ ಗು.ಸಂ. 175 : 99ರಲ್ಲಿ ಎಫ್ ಐಆರ್ ದಾಖಲಾಗಿದ್ದು ಈ ತನಿಖೆ ಸಿಓಡಿಗೆ ಒಪ್ಪಿಸಲಾಗಿದೆಯೆ;

ಆ) ಆರೋಪಿತರು ಬಹಿರಂಗವಾಗಿ ತಿರುಗಾಡುತ್ತಿದ್ದರುವುದು ಹಾಗೂ ಅಂತಹವರನ್ನು ದಸ್ತಗಿರಿ ಮಾಡಿಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಇ) ದಸ್ತಗಿರಿ ಮಾಡಿದ್ದಲ್ಲಿ ಯಾರು ಯಾರನ್ನು ದಸ್ತಗಿರಿ ಮಾಡಲಾಗಿದೆ; ಈ ಪ್ರಕರಣದ ಯಾವುದಾದರೂ ವಾಹನವನ್ನು ಗುರುತಿಸಲಾಗಿದೆಯೆ? ಹಾಗಿದ್ದಲ್ಲಿ ಆ ವಾಹನವನ್ನು ಜಪ್ತಿ ಮಾಡಲಾಗಿದೆಯೆ;

ಈ) ಈ ಪ್ರಕರಣ ಸಿ.ಓ.ಡಿ.ಗೆ ವಹಿಸಲಾಗಿದೆಯೇ

ಉ) ಹಾಗಿದ್ದಲ್ಲಿ ತನಿಖೆ ಈಗ ಯಾವ ಹಂತದಲ್ಲಿದೆ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) :

ಅ) ಹೌದು

ಆ) ಪ್ರಥಮ ವರ್ತಮಾನ ವರದಿಯಲ್ಲಿನಮೂದಿಸಿರುವ 9 ಜನ ಆರೋಪಿತರ ಪೈಕಿಇಬ್ಬರು ರಾಜ್ಯ ಉಚ್ಚ ನ್ಯಾಯಾಲಯದಿಂದನಿರೀಕ್ಷಣಾ ಜಾಮೀನು ಪಡೆದಿದ್ದು ಉಳಿದ 7 ಜನ ಆರೋಪಿಗಳು ತಲೆ ಮರೆಸಿಕೊಂಡಿದ್ದಾರೆ.

ಇ) ಉದ್ಭವಿಸುವುದಿಲ್ಲ.